ವ್ಯರ್ಥ ಮಾಡಿ**,** ಶಾಂತಿಯನ್ನು ಭಂಗ ಮಾಡುವ ಮುನಿಯಿಂದ ಸ್ವಯಂ ನಿಮ್ಮನ್ನು ಮುಕ್ತರನ್ನಾಗಿ ಮಾಡಿಕೊಂಡು ಮಾತಿನ ಮಿತವ್ಯಯ ಮಾಡಿರಿ

ಇಂದು ಬಾಪ್ದಾದಾರು ನಾಲ್ಕೂ ಕಡೆಯ ಆತ್ಮರನ್ನು ನಿಮ್ಮೆಲ್ಲರ ಜೊತೆಯಲ್ಲಿ ನೋಡುತ್ತಿದ್ದಾರೆ. ನಾಲ್ಕೂ ಕಡೆಯ ಮಕ್ಕಳು ಆಕಾರ ರೂಪದಿಂದ ಬಾಪ್ದಾದಾರವರ ಎದುರಿನಲ್ಲಿ ಇದ್ದಾರೆ. ಡಬಲ್ ಸಭೆ, ಸಾಕಾರೀ ಹಾಗೂ ಆಕಾರೀ, ಎರಡೂ ಎಷ್ಟು ದೊಡ್ಡ ಸಭೆಗಳಾಗಿವೆ. ಬಾಪ್ದಾದಾರವರು ಎರಡೂ ಸಭೆಯ ಮಕ್ಕಳನ್ನು ನೋಡಿ ಹರ್ಷಿತರಾಗುತ್ತಿದ್ದಾರೆ, ಏಕೆಂದರೆ ಬಾಪ್ದಾದಾರವರು. ಮಕ್ಕಳು ಪ್ರತಿಯೊಬ್ಬರನ್ನೂ ಎರಡು ನೋಡುತ್ತಿದ್ದೇವೆ. ಮಕ್ಕಳು ಪ್ರತಿಯೊಬ್ಬರೂ ಈ ಸವ ಮನುಷ್ಯಾತ್ಮರ ಪೂರ್ವಜರಾಗಿದ್ದಾರೆ, ಇಡೀ ವೃಕ್ಷದ ಫೌಂಡೇಷನ್ ಆಗಿದ್ದಾರೆ. ಏಕೆಂದರೆ ಬೇರಿನಿಂದ ಇಡೀ ವೃಕ್ಷವು ಬೆಳೆಯುತ್ತದೆ. ಹಾಗೂ ಇನ್ನೊಂದು ರೂಪದಲ್ಲಿ ಪೂರ್ವಜರೆಂದು ಹಿರಿಯರಿಗೂ ಹೇಳುತ್ತಾರೆ. ಹೀಗೆ ಸೃಷ್ಟಿಯ ಆದಿಯಲ್ಲಿ ನಿಮ್ಮ ಆತರದೇ ಪಾತ್ರವಿದೆ, ಆದ್ದರಿಂದ ಹಿರಿಯರಲ್ಲಿ ಹಿರಿಯರಾಗಿದ್ದೀರಿ. ಈ ಕಾರಣದಿಂದ ಸರ್ವ ಆತ್ಮರ ಪೂರ್ವಜರಾಗಿದ್ದೀರಿ, ಜೊತೆ ಜೊತೆಯಲ್ಲಿ ಶ್ರೇಷ್ಠಾತಿಶ್ರೇಷ್ಠರಾದ ತಂದೆಯ ಪ್ರಥಮ ರಚನೆಯು ನೀವು ಬ್ರಾಹ್ಮಣ ಆತ್ಮರಾಗಿದ್ದೀರಿ, ಆದ್ದರಿಂದ ಹೇಗೆ ಸರ್ವೋನ್ನತನಾದವರು ಭಗವಂತ ಆಗಿದ್ದೇರೋ, ಹಾಗೆ ಹಿರಿಯರಿಗಿಂತಲೂ ಹಿರಿಯ ಪೂರ್ವಜರು ನೀವಾಗಿದ್ದೀರಿ. ಆದ್ದರಿಂದ ಇಷ್ಟೊಂದು ಪೂರ್ವಜ ಮಕ್ಕಳೆಲ್ಲರನ್ನೂ ನೋಡಿ ತಂದೆಯು ಹರ್ಷಿತನಾಗುತ್ತಾರೆ. ನಾವು ಪೂರ್ವಜರಾಗಿದ್ದೇವೆಂದು ನೀವೂ ಹರ್ಷಿತರಾಗುತ್ತೀರಿ. ಇದೇ ನಿಶ್ಚಯ ಹಾಗೂ ನಶೆಯಲ್ಲಿ ಇರುತ್ತೀರಾ? ಹೀಗೆ ಬಾಪ್ದಾದಾರವರು ಇಂದು ಪೂರ್ವಜರ ಸಭೆಯನ್ನು ನೋಡುತ್ತಿದ್ದಾರೆ.

ನೀವು ಯಾರು ಯಾರು ತಂದೆಯ ಮಕ್ಕಳಾಗಿದ್ದೀರೋ ಅವರೆಲ್ಲರೂ ಮಾಯೆಯಿಂದ ಪಾರಾಗಿದ್ದೀರಿ, ಮಗ ಎನ್ನುವುದರ ಅರ್ಥವೇ ತಂದೆಯ ಸಂಬಂಧಿಯಾಗುವುದು. ಅರ್ಥಾತ್ ಮಗನಾಗುವುದು. ಹೀಗೆ ಮಾಯೆಯಿಂದ ಪಾರಾಗಿರುವವರು ತಂದೆಯ ಮಕ್ಕಳಾಗುತ್ತಾರೆ. ನೀವೆಲ್ಲರೂ ಮಾಯಿಯಿಂದ ಪಾರಾಗಿರುವವರಾಗಿದ್ದೀರಲ್ಲವೇ ಅಥವಾ ಯಾವಾಗಲಾದರೂ ಮಾಯೆಯ ಚಕ್ರದಲ್ಲಿ ಬಂದುಬಿಡುತ್ತೀರೋ? ಎಂತಹ ಚಕ್ರವ್ಯೂಹವಿರುತ್ತದೆಯೆಂದರೆ, ಅನೇಕ ತರಹದರಿಂದ ಹೊರಬರಬೇಕಾಗುತ್ತದೆ ಎಂದು ಹೇಳುತ್ತಾರಲ್ಲವೇ. ಆದ್ದರಿಂದ ಯಾವುದೇ ಮಾಯೆಯ ಚಕ್ರವ್ಯೂಹದಲ್ಲಿ ಸಿಕ್ಕಿಬೀಳುವವರಂತೂ ಇಲ್ಲವಲ್ಲವೇ? ಏನಾದರೂ ಚಕ್ರವಿದೆಯೇ? ಪಾರಾಗಿದ್ದೀರಾ? (ಹೌದು ಬಾಬಾ) ಇಲ್ಲಿ ಹೌದು ಬಾಬಾ ಎಂದು ಹೇಳಿ ಹೋಗುವುದು ಹಾಗೂ ಅಲ್ಲಿ ಹೋಗಿ ಇಲ್ಲ ಬಾಬಾ ಎಂದು ಹೇಳುವುದು. ಹೀಗೆ ಮಾಡಬೇಡಿರಿ. ಯಾವಾಗ ಒಂದುಸಲ ಚಕ್ರದಿಂದ ಹೊರಗೆ ಬರುವ ಮಾರ್ಗ ಅಥವಾ ವಿಧಿಯನ್ನು ಕಲಿತುಕೊಳ್ಳುತ್ತೀರೋ ಆಮೇಲೆ ಸಿಕ್ಕಿಹಾಕಿಕೊಳ್ಳುವ ಪ್ರಮೇಯವೇ ಇಲ್ಲ. ಮಾಯೆಯನ್ನೂ ಸಹ ಚೆನ್ನಾಗಿ ತಿಳಿದುಕೊಂಡು ಬಿಟ್ಟಿದ್ದೀರಲ್ಲವೇ. ಅಥವಾ ಯಾವಾಗಲಾದರೂ ತಿಳಿಯದವರಾಗಿ ಬಿಡುತ್ತೀರೋ? ಆಮೇಲೆ ನನಗಂತೂ ಎಂದು ಮಾಯೆಯಾಗಿದೆಯೆಂದು ಗೊತ್ತೇ ಆಗಲಿಲ್ಲ ಎಂದು ಹೇಳುತ್ತೀರೋ? ಏಕೆಂದರೆ ಹೇಗೆ ಈಗಿನ ಕಾಲದ ಫ್ಯಾಷನ್ ಏನಾಗಿದೆಯೆಂದರೆ ಭಿನ್ನ ಭಿನ್ನ ಮುಖವಾಡವನ್ನು ತುಂಬಾ ಧರಿಸುತ್ತಾರೆ. ಈಗತಾನೇ ಏನೋ ಆಗುತ್ತಾರೆ, ಹಾಗೂ ಇದೀಗಲೇ, ಬೇರೆ ಏನೋ ಆಗುತ್ತಾರೆ. ಹಾಗೆಯೇ ಮಾಯೆಯ ಬಳಿಯೂ ಈ ಸಿಕ್ಕಿ ಬೀಳಿಸುವ ಮುಖವಾಡಗಳು ತುಂಬಾ ಇವೆ. ಅದರ ಬಳಿ ಒಳ್ಳೆಯ ದೊಡ್ಡ ಅಂಗಡಿಯಿದೆ. ಯಾವ ಸಮಯದಲ್ಲಿ ಯಾವ ರೂಪವನ್ನು ಧಾರಣೆ ಮಾಡಲು ಬಯಸಿದರೆ, ಆ ಸಮಯದಲ್ಲಿ ಅದನ್ನು ಧಾರಣೆ ಮಾಡಿಬಿಡುತ್ತದೆ. ಹಾಗೂ ಒಂದುವೇಳೆ ತಿಳಿದೋ ತಿಳಿಯದೆಯೋ ಸಿಕ್ಕಿಬಿದ್ದರೆ ಅದರಿಂದ ಹೊರಬರುವುದರಲ್ಲಿ ತುಂಬಾ ಸಮಯವು ಹಿಡಿಯುತ್ತದೆ. ಹಾಗೂ ಸಂಗಮಯುಗದ ಒಂದು ಸೆಕೆಂಡು ವ್ಯರ್ಥವಾಗಿ ಕಳೆದು ಹೋಗುವುದು ಅರ್ಥಾತ್ ಒಂದು ವರ್ಷವನ್ನು ಕಳೆದುಬಿಡುವುದಾಗಿದೆ. ಕೇವಲ ಒಂದು ಸೆಕೆಂಡ್ ಅಲ್ಲ. ಸಂಗಮಯುಗವು ಎಷ್ಟು ಸಣ್ಣ ಯುಗವಾಗಿದೆ. ವಿಚಾರ ಮಾಡಿರಿ. ಈಗಂತೂ ಡೈಮಂಡ್ ಜೂಬಿಲಿಯನ್ನು (ವಜ್ರಮಹೋತ್ಸವವನ್ನು) ಆಚರಣೆ ಮಾಡಲಿದ್ದೀರಿ ಹಾಗೂ ಅತಿ ಸ್ವಲ್ಪ ಸಮಯದಲ್ಲಿ ಏನು ಆಗಬೇಕೆಂದಿದ್ದೀರೋ ಅದು ಆಗಬಹುದು, ಏನು ಜಮಾ ಮಾಡಿಕೊಳ್ಳಬೇಕೋ ಅದನ್ನು ಮಾಡಿಕೊಳ್ಳಬಹುದು, ಹೀಗೆ ಬಾಪ್ದಾದಾರವರು ಏನು ನೋಡುತ್ತಿದ್ದಾರೆ ಎಂದರೆ, ಈಗ ತಯಾರಾಗುವ ಸಮಯವು ಎಷ್ಟು ಕಡಿಮೆ ಇದೆಯೆಂದು. ಹಾಗೂ ಇಡೀ ಕಲ್ಪದವರೆಗೆ ಶ್ರೇಷ್ಠರಾಗುವಿರಿ, ಐದು ಸಾವಿರ ವರ್ಷಗಳ ಕಲ್ಪ ಹಾಗೂ ಈಗಿನ 60 ವರ್ಷದಲ್ಲಿ ಎಷ್ಟು ಅಂತರವಿದೆ. ಮುಂದೆ ಎಷ್ಟೇ ಸಮಯ ಉಳಿದಿದ್ದರೂ ಸಾವಿರದಷ್ಟು ಇರಲಾರದು ಅಲ್ಲವೇ.

ಆದ್ದರಿಂದ ಈ ಸ್ವಲ್ಪ ಸಮಯದಲ್ಲಿ ರಾಜ್ಯಾಧಿಕಾರಿ ಆಗುವ ಹಾಗೂ ರಾಯಲ್ ಫ್ಯಾಮಿಲಿಯಲ್ಲಿ (ರಾಜಕುಲದಲ್ಲಿ) ಬರುವ ಸಲುವಾಗಿ ಏನು ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಸಂಖ್ಯೆಯ ಗಣನೆಯಿಂದ ಸತ್ಯಯುಗದಲ್ಲಿ ವಿಶ್ವದ ರಾಜಸಿಂಹಾಸನವು ಎಲ್ಲರಿಗೂ ದೊರೆಯುವುದು ಸಾಧ್ಯವಿಲ್ಲ. ಮೊದಲನೆಯ ಲಕ್ಷ್ಮೀ ನಾರಾಯಣರು ಸಿಂಹಾಸನದ ಮೇಲೆ ಕುಳಿತುಕೊಳ್ಳುವರು. ಆದರೆ ಮೊದಲನೆಯ ಲಕ್ಷ್ಮೀನಾರಾಯಣರ ರಾಜಕುಟುಂಬದವರು ಯಾರು ಇರುತ್ತಾರೋ ಅವರಿಗೂ ಸಹ ಅಷ್ಟೇ ಎಲ್ಲರ ಮೂಲಕ ಸ್ನೇಹ ಹಾಗೂ ಸನ್ಮಾನವು ದೊರೆಯುತ್ತದೆ. ಆದ್ದರಿಂದ ಮೊದಲನೆಯ ರಾಜಧಾನಿಯ ರಾಜಕುಟುಂಬದಲ್ಲಿ ಬಂದರೂ ಸಹ ಮೊದಲನೆಯ ರಾಜಧಾನಿಯವರಾಗುತ್ತಾರೆ. ದೊಡ್ಡ ಸಿಂಹಾಸನದ ಮೇಲೆ ಕುಳಿತುಕೊಳ್ಳದಿದ್ದರೂ ಸಹ ಪ್ರಾಲಬ್ಧವೂ ನಂಬರ್ ಒನ್ನ

ಗಣನೆಯಿಂದಲೇ ದೊರೆಯುತ್ತದೆ. ಇಲ್ಲದಿದ್ದರೆ ನಿಮಗೆಲ್ಲರಿಗೂ ತ್ರೇತಾದವರೆಗೂ ಸಿಂಹಾಸನವು ದೊರೆಯುವುದಿಲ್ಲ. ಆದರೆ ವಿಶ್ವರಾಜ್ಯಾಧಿಕಾರಿಯ ಲಕ್ಷ್ಯವು ಎಲ್ಲರದೂ ಆಗಿದೆಯಲ್ಲವೇ? ಅಥವಾ ಅಲ್ಲಿಯೂ ಸಹ ಒಂದು ರಾಜ್ಯದ (ಪ್ರಾಂತದ) ರಾಜ ಆಗಿಬಿಡುವಿರೋ? ಆದ್ದರಿಂದ ಮೊದಲನೆಯ ರಾಜಕುಟುಂಬದಲ್ಲಿ ಬರುವುದೂ ಸಹ ಶ್ರೇಷ್ಠ ಪುರುಷಾರ್ಥವಾಗಿದೆ. ಒಬ್ಬೊಬ್ಬರಿಗೆ ಸಿಂಹಾಸನವು ದೊರೆಯುತ್ತದೆ. ಇವರದೂ ಗುಪ್ತವಾದ ರಹಸ್ಯವಿದೆ.

ಯಾರು ಸದಾ ಸಂಗಮಯುದಲ್ಲಿ ತಂದೆಯ ಹೃದಯ ಸಿಂಹಾಸನದ ಮೇಲೆ ಸ್ವತಃವಾಗಿ ಹಾಗೂ ಸದಾ ಇರುತ್ತಾರೋ, ಆಗಾಗ್ಗೆ ಇರುವುದಿಲ್ಲವೋ, ಯಾರು ಸದಾ ಆದಿಯಿಂದ ಅಂತ್ಯದವರೆಗೆ ಸ್ವಪ್ನ ಮಾತ್ರವೂ ಸಂಕಲ್ಪ ಮಾತ್ರವೂ ಪವಿತ್ರತೆಯ ವ್ರತದಲ್ಲಿ ಸದಾ ಇರುತ್ತಾರೋ, ಸ್ವಪ್ನದಲ್ಲಿಯೂ ಸಹ ಅಪವಿತ್ರತೆಯನ್ನು ಸ್ಪರ್ಶ ಮಾಡುವುದಿಲ್ಲವೋ ಅಂತಹ ಶ್ರೇಷ್ಠ ಆತ್ಮರು ಸಿಂಹಾಸನಕ್ಕೆ ಅಧಿಕಾರಿಯಾಗಲು ಸಾಶ್ಯವಿದೆ. ಯಾರು ನಾಲ್ಕೂ ಸಬ್ಜೆಕ್ಟ್‌ಗಳಲ್ಲಿ ಅರ್ಥಾತ್ ಜ್ಞಾನ, ಯೋಗ, ಧಾರಣೆ, ಸೇವೆಯಲ್ಲಿ ಉತ್ತಮ ಮಾರ್ಕ್ಸ್ ತೆಗೆದುಕೊಂಡಿರುತ್ತಾರೋ, ಆದಿಯಿಂದ ಅಂತ್ಯದವರೆಗೆ ಉತ್ತಮ ಕ್ರಮಸಂಖ್ಯೆಯಿಂದ ಪಾಸ್ ಆಗುತ್ತಾರೋ ಅವರನ್ನೇ ಪಾಸ್ ವಿತ್ ಆನರ್ ಎಂದು ಕರೆಯಲಾಗುತ್ತದೆ. ಯಾರಿಗೆ ಮಧ್ಯ ಮಧ್ಯದಲ್ಲಿ ಮಾರ್ಕ್ಸ್ (ಅಂಕಗಳು) ಕಡಿಮೆ ದೊರೆತಿವೆಯೋ ಅಮೇಲೆ ಮೇಕಪ್ ಮಾಡಿದ್ದಾರೆ, ಹಾಗೆ ಮೇಕಪ್ ಮಾಡಿರುವವರಲ್ಲ. ಆದರೆ ಆದಿಯಿಂದ ನಾಲ್ಕೂ ಸಬ್ಜೆಕ್ಟ್‌ಗಳಲ್ಲಿ ತಂದೆಯ ಮನಸ್ಸಿಗೆ ಪ್ರಿಯರಾಗುತ್ತಾರೋ ಅವರು ಸಿಂಹಾಸನಕ್ಕೆ ಅಧಿಕಾರಿಯಾಗಲು ಸಾಧ್ಯವಿದೆ. ಜೊತೆ ಜೊತೆಯಲ್ಲಿ ಯಾರು ಬ್ರಾಹ್ಮಣ ಸಂಸಾರದಲ್ಲಿ ಸರ್ವರಿಗೂ ಪ್ರಿಯರೂ, ಸರ್ವರಿಗೂ ಸಹಯೋಗಿಯೂ ಆಗಿ ಇರುತ್ತಾರೋ, ಬ್ರಾಹ್ಮಣ ಪರಿವಾರದ ಪ್ರತಿಯೊಬ್ಬರೂ ಮನಸ್ಸಿನಿಂದ ಅವರ ಸನ್ಮಾನ ಮಾಡುತ್ತಾರೋ ಅಂತಹ ಸನ್ಮಾನ ಪಡೆಯುವವರು ಸಿಂಹಾಸನಕ್ಕೆ ಅಧಿಕಾರಿಯಾಗಲು ಸಾಧ್ಯವಿದೆ. ಒಂದುವೇಳೆ ಈ ವಿಶೇಷತೆಗಳಲ್ಲಿ ಯಾವುದರಲ್ಲಿಯಾದರೂ ಕಡಿಮೆಯಿದ್ದರೆ, ನಂಬರ್ವಾರ್ ರಾಜಕುಟುಂಬದಲ್ಲಿ ಬರಬಹುದು. ಮೊದಲನೆಯ ರಾಜಕುಟುಂಬದಲ್ಲಿಯಾದರೂ ಬರಬಹುದು. ಎಂಟನೆಯ ರಾಜಕುಟುಂಬದಲ್ಲಿಯಾದರೂ ಬರಬಹುದು. ಆದ್ದರಿಂದ ಒಂದುವೇಳೆ ಸಿಂಹಾಸನಕ್ಕೆ ಅಧಿಕಾರಿಯಾಗಬೇಕಾಗಿದ್ದರೆ ಈ ಎಲ್ಲಾ ವಿಶೇಷತೆಗಳನ್ನೂ ಪರಿಶೀಲನೆ ಮಾಡಿಕೊಳ್ಳಿರಿ. ಒಂದುವೇಳೆ ಸೇವೆಯಲ್ಲಿ 100 ಮಾರ್ಕ್ಸ್ (ಅಂಕಗಳನ್ನು) ಜಮಾ ಮಾಡಿಕೊಂಡಿದ್ದರೆ, ಆದರೆ ಧಾರಣೆಯಲ್ಲಿ 25% ಪರ್ಸೆಂಟ್ ದೊರೆತಿದ್ದರೆ ಏನಾಗುವುದು? ಅವರು ಅಧಿಕಾರಿಯಾಗುವರೇನು? ಹಲವು ಮಕ್ಕಳು ಅನ್ಯ ಸಬ್ಜೆಕ್ಟಗಳಲ್ಲಿ ಮುಂದೆ ಹೋಗಿ ಬಿಡುತ್ತಾರೆ. ಆದರೆ ಪ್ರಾಕ್ಟಿಕಲ್ (ನಿತ್ಯ ಜೀವನದಲ್ಲಿ) ಧಾರಣೆಯಲ್ಲಿ ಎಂತಹ ಸಮಯವೋ ಅದರ ಅನುಸಾರವಾಗಿ ತಮ್ಮನ್ನು ಪರಿವರ್ತನೆ ಮಾಡಿಕೊಳ್ಳುತ್ತಾರೋ ಅವರು ರಿಯಲ್ ಗೋಲ್ಡ್ (ಅಪ್ಪಟ ಬಂಗಾರ) ಆಗುತ್ತಾರೆ. ಒಮ್ಮೊಮ್ಮೆ ಮಾಯೆಯು ಮಕ್ಕಳಿಗಿಂತಲೂ ಚತುರ ಆಗಿಬಿಡುತ್ತದೆ. ಅದು ತಕ್ಷಣವೇ ಸಮಯಾನುಸಾರವಾಗಿ ಸ್ವರೂಪವನ್ನು ಧಾರಣೆ ಮಾಡಿಬಿಡುತ್ತದೆ. ಹಾಗೂ ಮಕ್ಕಳು ಏನು ಹೇಳುತ್ತಾರೆ. ತಂದೆಯ ಬಳಿಯಂತೂ ಎಲ್ಲರ ಬಗ್ಗೆಯೂ ವರದಿಯು ಬರುತ್ತದೆ. ಒಂದುವೇಳೆ ಯಾರಾದರೂ ತಪ್ಪು ಮಾಡಿದರೆ ಹಾಗೂ ಇನ್ನೊಬ್ಬರು ಸರಿಯಾಗಿ ನಡೆದುಕೊಂಡರೆ ಅಥವಾ ಇಬ್ಬರಲ್ಲಿಯೂ ಏನಾದರೂ ಲೋಪದೋಷವಿದ್ದರೆ, ನೀವು ಪೂರ್ತಿ ಸರಿಯಾಗಿದ್ದು, ಅವರದು ತಪ್ಪಿದ್ದರೆ ಎಂತಹ ಸಮಯವೋ ಅಂತಹ ವಾಯುಮಂಡಲವು ಕಂಡುಬರುತ್ತದೆ.. ಸಾಮಾನ್ಯವಾಗಿ ನಿಮನ್ನೇ ಪರಿವರ್ತನೆ ಮಾಡಿಕೊಳ್ಳಬೇಕಾಗುತ್ತದೆ. ಅಡಗಿಸಿಕೊಳ್ಳಬೇಕಾಗಬಹುದು, ನಿರ್ಮೂಲ ಮಾಡಬೇಕಾಗಬಹುದು ಅಥವಾ ದೂರ ಮಾಡಬೇಕಾಗಬಹುದು, ಆದರೆ ಮಕ್ಕಳು ಏನು ಹೇಳುತ್ತಾರೆಂದರೆ, ಪ್ರತಿಯೊಂದು ಸಂದರ್ಭದಲ್ಲಿಯೂ ಪ್ರತಿಯೊಂದು ಘಟನೆಯಲ್ಲಿಯೂ ನಾನೇ ಸಾಯಬೇಕೇನು, ಸಾಯುವುದಕ್ಕಾಗಿ ನಾನು ಇದ್ದೇನೆ; ಮೋಜು ಮಾಡಲು ಇವರು ಇದ್ದಾರೆ ಎಂದು ಹೇಳುತ್ತಾರೆ. ಸದಾ ಸಾಯಬೇಕಾಗುತ್ತದೆ. ಇದಂತೂ ತುಂಬಾ ಕಷ್ಟವಿದೆ. ಮರ್ಜೀವಾ ಅಂತೂ ಆಗಿಬಿಟ್ಟಿರಿ. ಅದಂತೂ ಸಹಜವಾಗಿದೆ. ಬ್ರಹ್ಮಾಕುಮಾರ ಕುಮಾರಿಯರು ಆಗಿಬಿಟ್ಟಿದ್ದರಿಂದ ಮರ್ಜೀವಾ (ಸತ್ತು ಬದುಕಿದವರು) ಆದಿರಲ್ಲವೇ. ಈ ಸಾಯುವುದಂತೂ ತುಂಬಾ ಸಹಜವಾಗಿ ಆಗಿಬಿಟ್ಟಿತು. ಸತ್ತು ಹೋದಿರಿ, ಬ್ರಹ್ಮಾಕುಮಾರಿ ಆಗಿಬಿಟ್ಟಿರಿ. ಆದರೆ ಈ ಪದೇ ಪದೇ ಸಾಯುವುದು ತುಂಬಾ ಕಷ್ಟವಿದೆ. ಕಷ್ಟವಾಗಿದೆಯಲ್ಲವೇ? ಸಣ್ಣವರು ಏನು ಹೇಳುತ್ತಾರೆಂದರೆ, ನಾವೇ ಜಾಸ್ತಿ ಸಾಯಬೇಕಾಗುತ್ತದೆ ಎಂದು ಹಾಗೂ ದೊಡ್ಡವರು ಏನು ಹೇಳುತ್ತಾರೆಂದರೆ, ನಾವೇ ಜಾಸ್ತಿ ಕೇಳಬೇಕಾಗುತ್ತದೆ ಎಂದು. ಹೀಗೆ ನೀವು ಸಾಯಬೇಕಾಗುತ್ತದೆ. ಹಾಗೂ ಅವರು ಕೇಳಬೇಕಾಗುತ್ತದೆ. ಆದ್ದರಿಂದ ಯಾರು ಸಾಯಬೇಕಾಗುತ್ತದೆ? ಯಾರು ಸತ್ತರು? ಒಬ್ಬರು ಸತ್ತರೇ? ಅಥವಾ ಇಬ್ಬರೂ ಸತ್ತರೇ? ಇಬ್ಬರೂ ಸತ್ತಿದ್ದರೆ, ಪ್ರಶ್ನೆಯೇ ಸಮಾಪ್ತಿಯಾಯಿತು. ನಾಟಕವು ಸಮಾಪ್ತಿಯಾಯಿತು. ಆದ್ದರಿಂದ ಸಾಯುವುದು ಬರುತ್ತದೆಯೇ ಅಥವಾ ಸ್ವಲ್ಪ ಕಷ್ಟವೆನಿಸುತ್ತದೆಯೋ? ಆದ್ದರಿಂದ ಸಾಯುವುದು ಬರುತ್ತದೆಯೇ ಅಥವಾ ಸ್ವಲ್ಪ ಕಷ್ಟವೆನಿಸುತ್ತದೆಯೋ? ಸ್ವಲ್ಪ ಉಸಿರು ಕಟ್ಟುತ್ತದೆ, ಕಷ್ಟಪಟ್ಟು ಉಸಿರಾಟ ಮಾಡಬೇಕಾಗುತ್ತದೆ. ತೊಂದರೆಯಾಗುತ್ತದೆಯೇ? ನಾನೇ ಸಾಯಬೇಕೇನು... ನಾನೇ ಪರಿವರ್ತನೆಯಾಗಬೇಕೇನು, ಪರಿವರ್ತನೆ ಆಗುವುದು ನನ್ನದೇ ಜವಾಬ್ದಾರಿಯಾಗಿದೆಯೇ ಎಂದು ಹೇಳುತ್ತೀರಲ್ಲವೇ -ಇನ್ನೊಬ್ಬರದೂ ಜವಾಬ್ದಾರಿಯಿದೆ. ಅರ್ಧ ಅರ್ಧ ಹಂಚಿಕೊಳ್ಳಿರಿ. ನೀವು ಇಷ್ಟು ಸಾಯಿರಿ. ನಾನು ಇಷ್ಟು ಸಾಯುವೆನು ಎಂದು ಹೇಳುತ್ತಾರೆ. ಬಾಪ್ದಾದರವರಿಗಂತೂ ಆ ಸಮಯದಲ್ಲಿ ತುಂಬಾ ದಯೆಯೂ ಉತ್ಪನ್ನವಾಗುತ್ತದೆ. ಆದರೆ ಈ ಸಾಯುವುದು ಸಾಯುವುದಲ್ಲ. ಈ ಸಾಯುವುದು ಸದಾಕಾಲದವರೆಗೆ ಜೀವಿಸುವುದಾಗಿದೆ. ಸಾಯದಿದ್ದರೆ ಸ್ವರ್ಗ ಸಿಗುವುದಿಲ್ಲ ಎಂದು ಜನರು ಹೇಳುತ್ತಾರಲ್ಲವೇ. ಆ ಸ್ಥೂಲ ಸಾವಿನಿಂದಂತೂ ಸ್ವರ್ಗವು ದೊರೆಯುವುದಿಲ್ಲ. ಆದರೆ ಈ ರೀತಿ ಸಾಯುವುದರಿಂದ ಸ್ವರ್ಗದ ಅಧಿಕಾರವು ಅವಶ್ಯವಾಗಿ ದೊರೆಯುವುದು. ಆದ್ದರಿಂದ ಈ ರೀತಿ ಸಾಯುವುದು ಅರ್ಥಾತ್ ಸ್ವರ್ಗಕ್ಕೆ ಅಧಿಕಾರಿಯಾಗುವುದಾಗಿದೆ.

ಸಾಯಬೇಕಾಗುತ್ತದೆ ಸಾಯಬೇಕಾಗುತ್ತದೆ ಎಂದು ಹೆದರಿ ಬಿಡುತ್ತೀರಲ್ಲವೇ, ಸಹನೆ ಮಾಡಬೇಕಾದರೆ ಸಣ್ಣ ಮಾತೂ ದೊಡ್ಡದಾಗಿ ಬಿಡುತ್ತದೆ. ವಿಚಾರ ಮಾಡಿರಿ. ಯಾವ ಕಳ್ಳನೂ ಅಥವಾ ಡಕಾಯಿತನೂ ಇರುವುದಿಲ್ಲ. ಆದರೆ ಡಕಾಯಿತನು ಇದ್ದಾನೆಂದು ನಿಮ್ಮ ಮನಸ್ಸಿನಲ್ಲಿ ಭಯವು ಬಂದುಬಿಟ್ಟದೆ. ಆಗ ಭಯದಿಂದ ಏನಾಗುತ್ತದೆ? ಭಯದಿಂದ ಹೃದಯವು ತಲ್ಲಣಿಸುತ್ತದೆ ಅಥವಾ ಬ್ಲಡ್ ಪ್ರೆÀರ್ (ರಕ್ತದ ಒತ್ತಡವು ಏರುಪೇರಾಗುತ್ತದೆ. ಭಯದಿಂದ ಹೀಗೆ ಆಗುತ್ತದೆಯಲ್ಲವೇ? ಹೀಗೆ ಹೆದರಿ ಬಿಡುತ್ತೀರಿ, ಸಾಯುವುದು ದೊಡ್ಡ ಸಂಗತಿಯಲ್ಲ. ಆದರೆ ನಿಮ್ಮ ಭಯವು ದೊಡ್ಡ ಸಾಧನೆಯನ್ನಾಗಿ ಮಾಡಿಬಿಡುತ್ತದೆ. ಆಮೇಲೆ ಏನು ಹೇಳುತ್ತೀರೆಂದರೆ ನನಗೆ ಏನಾಗುತ್ತದೆಯೋ ಗೊತ್ತಿಲ್ಲ ಎಂದು ಆದರೆ ಹೇಗೆ ಧೈರ್ಯದಿಂದ ಮರ್ಜೀವಾ ಆಗುವುದರಲ್ಲಿ ಭಯಪಡಲಿಲ್ಲ. ಖುಷಿ ಖುಷಿಯಿಂದ ಮಾಡಿದಿರೋ ಹಾಗೆಯೇ ಖುಷಿ ಖುಷಿಯಿಂದ ಪರಿವರ್ತನೆ ಮಾಡಿಕೊಳ್ಳಿರಿ... ಸಾಯುವುದು ಎನ್ನುವ ಶಬ್ದವು ಉಚಿತವಲ್ಲ, ಆದರೆ ನೀವು ಸಾಯುವುದು ಸಾಯುವುದು ಎನ್ನುವ ಶಬ್ದವನ್ನು ಉಪಯೋಗಿಸಿಬಿಟ್ಟರಿ. ಆದ್ದರಿಂದ ಹೆದರಿಬಿಡುತ್ತಾರೆ. ವಾಸ್ತವವಾಗಿ ಇದು ಸಾಯುವುದಲ್ಲ. ಆದರೆ ನಿಮ್ಮ ಧಾರಣೆಯ ಸಭೆಕ್ಷನಲ್ಲಿ ಸ್ಥಾನ ತೆಗೆದುಕೊಳ್ಳಿರಿ, ಸಹನೆ ಮಾಡುವುದರಲ್ಲಿ ಗಾಬರಿಯಾಗಬೇಡಿರಿ, ಏಕೆ ಗಾಬರಿಯಾಗುತ್ತೀರಿ? ಏಕೆಂದರೆ ಅಸತ್ಯ ಆರೋಪಣೆಯಲ್ಲಿ ನಾನು ಏಕೆ ಸಹನೆ ಮಾಡಬೇಕು ಎಂದು ಯೋಚಿಸುತ್ತೀರಿ. ಆದರೆ ಸಹನೆ ಮಾಡಿರಿ ಎನ್ನುವ ಆಜ್ಞೆಯನ್ನು ಯಾರು ಕೊಟ್ಟಿದ್ದಾರೆ? ಸುಳ್ಳು ಹೇಳುವವರು ಕೊಟ್ಟಿದ್ದಾರೆಯೇ? ಅನೇಕ ಮಕ್ಕಳು ಸಹನೆ ಮಾಡಿಯೂ ಮಾಡುತ್ತಾರೆ, ಆದರೆ ವಿವಶರಾಗಿ ಸಹನೆ ಮಾಡುವುದು ಹಾಗೂ ಪ್ರೀತಿಯಿಂದ ಸಹನೆ ಮಾಡುವುದರಲ್ಲಿ ಅಂತರವಿದೆ. ಅದು ಸತ್ಯವಾದ ಸಂಗತಿಯಾಗಿದೆಯೆಂದು ಸಹನೆ ಮಾಡುವುದಿಲ್ಲ. ಆದರೆ ತಂದೆಯ ಆಜ್ಞೆಯಿರುವುದರಿಂದ ಸಹನಶೀಲರಾಗಿರಿ. ಹೀಗೆ ತಂದೆಯ ಆಜ್ಞೆಯನ್ನು ಪಾಲನೆ ಮಾಡುವುದರಿಂದ, ಪರಮಾತ್ಮನ ಆಜ್ಞೆಯನ್ನು ಪಾಲನೆ ಮಾಡುವುದು ಖುಷಿಯ ಸಂಗತಿಯಾಗಿದೆಯಲ್ಲವೇ. ಅಥವಾ ವಿವಶತೆಯಾಗಿದೆಯೋ? ಹೀಗೆ ಅನೇಕಸಲ ಸಹನೆ ಮಾಡಿಯೂ ಮಾಡುತ್ತೀರಿ. ಆದರೆ, ಸ್ವಲ್ಪ ಬೆರಕೆಯಾಗುತ್ತದೆ. ಪ್ರೀತಿಯೂ ಇರುತ್ತದೆ, ವಿವಶತೆಯೂ ಇರುತ್ತದೆ, ಸಹನೆ ಮಾಡುತ್ತಲೇ ಇರುವುದರಿಂದ ಏಕೆ ಖುಷಿಯಿಂದಲೇ ಮಾಡಬಾರದು. ನಿರ್ವಾಹವಿಲ್ಲದೆ ಏಕೆ ಮಾಡುತ್ತೀರಿ. ಆ ವ್ಯಕ್ತಿಯು ನಿಮ್ಮ ಮುಂದೆ ಕಾಣಿಸಿಕೊಳ್ಳುವುದರಿಂದ ವಿವಶತೆಯೆನಿಸುತ್ತದೆ. ಆದರೆ ತಂದೆಯು ಎದುರಿನಲ್ಲಿ ಬಂದರೆ, ತಂದೆಯು ಆಜ್ಞೆ ಪಾಲನೆ ಮಾಡುತ್ತಿದ್ದೇನೆ ಎನ್ನುವುದು ನಿಮ್ಮ ಮುಂದೆ ಬಂದರೆ ಪ್ರೀತಿಯುಂಟಾಗುವುದು, ವಿವಶತೆಯಿರುವುದಿಲ್ಲ. ಆದ್ದರಿಂದ ಈ ಶಬ್ದವನ್ನು ವಿಚಾರ ಮಾಡಬೇಡಿರಿ. ಈಗಿನ ಕಾಲದಲ್ಲಿ ಇದು ಸ್ವಲ್ಪ ಸಾಧಾರಣವಾಗಿ ಬಳಸಲ್ಪಡುತ್ತದೆ - ಸಾಯಬೇಕಾಗುತ್ತದೆ. ಸಾಯಬೇಕಾಗುತ್ತದೆ. ಎಲ್ಲಿಯವರೆಗೆ ಸಾಯಬೇಕಾಗುತ್ತದೆ. ಅಂತ್ಯದವರೆಗೂ ಅಥವಾ ಎರಡು ವರ್ಷ ಒಂದು ವರ್ಷ, 6 ತಿಂಗಳವರೆಗೋ, ಹಾಗಿದ್ದರೆ ಸತ್ತು ಬಿಡೋಣ... ಆದರೆ ಎಲ್ಲಿಯವರೆಗೆ ಸಾಯುವುದು? ಆದರೆ ಇದು ಸಾಯುವುದಲ್ಲ... ಅಧಿಕಾರ ಪಡೆಯುವುವಾಗಿದೆ. ಹಾಗಾದರೆ ಏನು ಮಾಡುವಿರಿ? ಸಾಯುವಿರಾ? ಈ ಸಾಯುವುದು ಎನ್ನುವ ಶಬ್ದವನ್ನು ಕೊನೆ ಮಾಡಿ, ಸಾಯಬೇಕು ಎಂದು ಯೋಚಿಸುವುದರಿಂದ ಸಾಯುವುದೆಂದರೆ ಅಂಜಿಕೆಯಾಗುತ್ತದೆಯಲ್ಲವೇ. ತಮ್ಮ ಮೃತ್ಯುವನ್ನು ಬಿಡಿ, ಒಬ್ಬೊಬ್ಬರು ಅನ್ಯರ ಮೃತ್ಯುವನ್ನು ನೋಡಿಯೂ ಹೆದರಿ ಬಿಡುತ್ತಾರೆ. ಆದ್ದರಿಂದ ಈ ಶಬ್ದವನ್ನು ಪರಿವರ್ತನೆ ಮಾಡಿಕೊಳ್ಳಿರಿ. ಇಂತಿಂತಹ ಮಾತನಾಡಬೇಡಿರಿ. ಶುದ್ಧ ಭಾಷೆಯನ್ನು ನುಡಿಯಿರಿ. ಬ್ರಾಹ್ಮಣರ ನಿಘಂಟಿನಲ್ಲಿ (ಡಿಕ್ಷನರಿಯಲ್ಲಿ) ಈ ಶಬ್ಬವು ಇಲ್ಲವೇ ಇಲ್ಲ. ಯಾರು ಪ್ರಾರಂಭ ಮಾಡಿದರೋ ಗೊತ್ತಿಲ್ಲ. ನಿಮ್ಮಲ್ಲಿಯೇ ಯಾರೋ ಪಾರಂಭ ಮಾಡಿರಬೇಕಲ್ಲವೇ. ನೀವು ಎಂದರೆ, ಎದುರಿನಲ್ಲಿ ಕುಳಿತುಕೊಂಡಿರುವವರಲ್ಲ. ಬ್ರಾಹ್ಮಣರೇ ಇದರ ಪ್ರಯೋಗವನ್ನು ಪ್ರಾರಂಭ ಮಾಡಿದ್ದಾರೆ. ಬಾಪ್ದಾದಾರವರು ಈ ಒಂದು ದೃಷ್ಟಾಂತವನ್ನು ತಿಳಿಸಿದೆವು. ಆದರೆ ಇಡೀ ದಿನದಲ್ಲಿ ಎಂತಹ ವ್ಯರ್ಥ ಶಬ್ದಗಳನ್ನು ಅಥವಾ ತಮಾಷೆಯ ಶಬ್ದಗಳನ್ನು ತುಂಬಾ ಬಳಸುತ್ತೀರಿ. ಒಳ್ಳೆಯ ಶಬ್ದಗಳನ್ನು ನುಡಿಯುವುದಿಲ್ಲ. ಆದರೆ ನನ್ನ ಭಾವವು ಇದಾಗಿರಲಿಲ್ಲ, ತಮಾಷೆಗಾಗಿ ಹೇಳಿಬಿಟ್ಟೆನು ಎಂದು ಹೇಳುತ್ತಾರೆ. ಆದರೆ ಇಂತಹ ತಮಾಷೆಯು ಬ್ರಾಹ್ಮಣ ಜೀವನದಲ್ಲಿ ನಿಮ್ಮ ನಿಯಮಗಳಲ್ಲಿ ಇದೆಯೇ? ಬರೆಯಲ್ಪಟ್ಟೇನೂ ಇಲ್ಲ ತಾನೇ? ತಮಾಷೆ ಮಾಡಬಹುದು ಎಂದಾದರೂ ಓದಿದ್ದೀರಾ. ತಮಾಷೆ ಮಾಡಿರಿ ಆದರೆ ಜ್ಞಾನಯುಕ್ತವಾಗಿ, ಯೋಗಯುಕ್ತವಾಗಿ ಮಾಡಿರಿ. ಆದರೆ ವ್ಯರ್ಥ ತಮಾಷೆ ಯಾವುದು ಅನ್ಯರ ಸ್ಥಿತಿಯನ್ನು ಏರುಪೇರು ಮಾಡಿಬಿಡುತ್ತದೆಯೋ ಅದು ತಮಾಷೆಯಾಗಿದೆಯೋ ಅಥವಾ ದುಃಖ ಕೊಡುವುದಾಗಿದೆಯೋ?

ಇಂದು ಬಾಪ್ದಾದಾರವರೂ ಏನು ನೋಡಿದೆವೆಂದರೆ, ಒಂದನೆಯದಾಗಿ ನೀವು ಎಲ್ಲರೂ ಪೂರ್ವಜರಾಗಿದ್ದೀರಿ ಹಾಗೂ ಎರಡನೆಯದಾಗಿ ಎಲ್ಲರಿಗಿಂತಲೂ ಅತಿ ಪೂಜ್ಯ ಆತ್ಮರೂ ನೀವಾಗಿದ್ದೀರಿ. ನಿಮ್ಮ ಸಮಾನ ಪೂಜೆಯು ಇಡೀ ಕಲ್ಪದಲ್ಲಿ ಯಾರದೂ ಆಗುವುದಿಲ್ಲ. ಹೀಗೆ ಪೂರ್ವಜರೂ ಆಗಿದ್ದೀರಿ ಹಾಗೂ ಪೂಜ್ಯರೂ ಆಗಿದ್ದೀರಿ. ಆದರೆ ಪೂಜ್ಯರೂ ನಂಬರ್ವಾರ್ ಆಗಿದ್ದೀರಿ. ಯಾರು ಯಾರು ಬ್ರಾಹ್ಮಣರಾಗುತ್ತಾರೋ ಅವರ ಪೂಜೆಯು ಅವಶ್ಯವಾಗಿ ಆಗುತ್ತದೆ. ಆದರೆ ಒಬ್ಬೊಬ್ಬರ ಪೂಜೆಯು ವಿಧಿಪೂರ್ವಕವಾಗಿ ಆಗುತ್ತದೆ. ಹಾಗೂ ಒಬ್ಬೊಬ್ಬರದು ಕಾಟಾಚಾರ ಪೂಜೆಯೂ ಆಗುತ್ತದೆ. ಹಾಗೆಯೇ ಯಾವ ಬ್ರಾಹ್ಮಣರು ಇಲ್ಲಿಯೂ ಯೋಗದಲ್ಲಿ ಕುಳಿತುಕೊಳ್ಳುತ್ತಾರೋ, ಆದರೆ ಯೋಗ ಮಾಡುತ್ತೇನೆಂದು ಹೇಳಿಕೊಂಡು ಸ್ವಲ್ಪ ನಿದ್ರೆ ಮಾಡುತ್ತಾರೋ, ಸ್ವಲ್ಪ ಯೋಗ ಮಾಡುತ್ತಾರೋ, ಸ್ವಲ್ಪ ವ್ಯರ್ಥ ಯೋಚನೆ ಮಾಡುತ್ತಾರೋ ಹಾಗೂ ಸ್ವಲ್ಪ ಶುಭವಾದುದನ್ನು ವಿಚಾರ ಮಾಡುತ್ತಾರೋ ಅವರು ಮಾಡುವುದು ಕಾಟಾಚಾರದ ಯೋಗವಾಯಿತಲ್ಲವೇ. ಬಿಳಿಯ ಬತ್ತಿಯು ಸುಟ್ಟು ಹೋಯಿತು ಕಾರ್ಯವು ಪೂರ್ತಿಯಾಗಿ ಬಿಟ್ಟಿತು. ಹಾಗೆಯೇ ಧಾರಣೆಯಲ್ಲಿಯೂ ಸಹ ಅಸಡ್ಡೆ ಮಾಡುವವರು ಅನೇಕರಿರುತ್ತಾರೆ. ಏನಾದರೂ ಪರಿಸ್ಥಿತಿಯು ಬಂದರೆ ಈಗಂತೂ ಹೀಗೆ ಮಾಡಿ ಮುಗಿಸೋಣ, ಆಮೇಲೆ ನೋಡಿಕೊಳ್ಳೋಣ ಎಂದು ಹೇಳುತ್ತಾರೆ. ಆದ್ದರಿಂದ ಇಂತಹವರ ಪೂಜೆಯು ಹೆಸರಿಗೆ

ಮಾತ್ರ ಪೂಜೆ ಆಗುತ್ತದೆ. ನೋಡಿರಿ ಲಕ್ಷಾಂತರ ಸಾಲಿಗ್ರಾಮಗಳನ್ನು ರಚನೆ ಮಾಡುತ್ತಾರೆ. ಆದರೆ ಅವುಗಳ ಪೂಜೆಯ ಎಂತಹದು ಆಗುತ್ತದೆ? ವಿಧಿಪೂರ್ವಕವಾಗಿ ಪೂಜೆಯು ಆಗುತ್ತದೆಯೇ? ಕಾಟಾಚಾರದಿಂದ ಪೂಜೆಯು ಆಗುತ್ತದೆಯಲ್ಲವೇ, ಪೈಪ್ನಿಂದ ಸ್ನಾನ ಮಾಡಿಸಿಬಿಡುತ್ತಾರೆ ಹಾಗೂ ತಿಲಕವನ್ನೂ ಸಹ ಹಾಗೆಯೇ ಸಣ್ಣ ಕಟೋರದಲ್ಲಿ ತುಂಬಿಕೊಂಡು ಚಿಮುಕಿಸಿ ಬಿಡುತ್ತಾರೆ. ತಿಲಕವನ್ನು ಇಟ್ಟಿದ್ದಾಗಿ ಬಿಟ್ಟರೆ ಇದು ಏನಾಯಿತು? ಹೆಸರಿಗೆ ಮಾತ್ರ ಪೂಜೆಯಾಯಿತಲ್ಲವೇ. ಪೂಜ್ಯರೇನೋ ಎಲ್ಲರೂ ಆಗುತ್ತೀರಿ. ಆದರೆ ಎಂತಹ ಪೂಜ್ಯರಾಗುತ್ತೀರೆಂದರೆ ನಂಬರ್ವಾರ್ ಆಗುತ್ತೀರಿ. ಒಬ್ಬೊಬ್ಬರದು ಪ್ರತಿಯೊಂದು ಕರ್ಮದ ಪೂಜೆ ಆಗುತ್ತದೆ. ದಂತಮಂಜನದ (ಹಲ್ಲುಜ್ಜುವ) ದರ್ಶನವೂ ಮಾಡಿಸಲ್ಪಡುತ್ತದೆ. ಮಥುರಾದಲ್ಲಿ ಹೋದರೆ ಹಲ್ಲುಜ್ಜುವ ಕ್ರಿಯೆಯು ನಡೆಯುತ್ತಾ ಇರುತ್ತದೆ. ದಂತಮಂಜನದ ದರ್ಶನವನ್ನೂ ಮಾಡಿಸುತ್ತಾರೆ. ಈ ಸಮಯವು ಹಲ್ಲುಜ್ಜುವ ಸಮಯವಾಗಿದೆ. ಆದ್ದರಿಂದ ಕಾರ್ಯವು ನಡೆದು ಹೋದರೆ ಸಾಕು ಎಂದು ಅಸಡ್ಡೆ ಮಾಡುವವರಾಗಬೇಡಿರಿ, ಇಲ್ಲದಿದ್ದರೆ ನಿಮ್ಮ ಪೂಜೆಯೂ ಸಹ ಹಾಗೆಯೇ ಆಗುತ್ತದೆ.

ಒಳ್ಳೆಯದು - ಎಲ್ಲಾ ಶಿಕ್ಷಕಿಯರೂ ಖುಷಿಯಾಗಿದ್ದೀರಾ? ಅಥವಾ ಯಾವ ಯಾವುದೋ ಇಚ್ಛೆಯು ಇನ್ನೂ ಮನಸ್ಸಿನಲ್ಲಿ ಇದೆಯೋ? ಯಾವುದಾದರೂ ಇಚ್ಛೆಯು ಇದ್ದರೆ, ಅದು ಉತ್ತಮವಾಗಲು ಅವಕಾಶ ಕೊಡುವುದಿಲ್ಲ. ಇಚ್ಛೆಯನ್ನು ಪೂರ್ಣ ಮಾಡಿಕೊಳ್ಳಿರಿ ಅಥವಾ ಉತ್ತಮರಾಗಿರಿ. ಇದು ನಿಮ್ಮ ಕೈಯಲ್ಲಿ ಇದೆ. ಹಾಗೂ ಏನು ನೋಡಲಾಗುತ್ತದೆಯೆಂದರೆ, ಈ ಇಚ್ಛೆಯೂ ಎಂತಹ ವಸ್ತುವಾಗಿದೆಯೆಂದರೆ, ಹೇಗೆ ಬಿಸಿಲಿನಲ್ಲಿ ನೀವು ನಡೆಯುತ್ತಿರುವಾಗ ನಿಮ್ಮ ನೆರಳು ಮುಂದೆ ಹೋಗುತ್ತಿರುತ್ತದೆ. ನೀವು ಅದನ್ನು ಹಿಡಿದುಕೊಳ್ಳುವ ಪ್ರಯತ್ನ ಮಾಡಿದರೆ ಅದು ಹಿಡಿದುಕೊಳ್ಳಲು ಸಿಗುತ್ತದೆಯೇ? ಆದರೆ ನೀವು ಅದಕ್ಕೆ ಬೆನ್ನು ತಿರುಗಿಸಿ ಬಂದರೆ ಆ ನೆರಳು ಎಲ್ಲಿ ಹೋಗುವುದು? ನಿಮ್ಮ ಹಿಂದೆ ಹಿಂದೆ ಬರುವುದು. ಹಾಗೆಯೇ ಇಚ್ಛೆಯು ತನ್ನ ಕಡೆ ಆಕರ್ಷಣೆ ಮಾಡಿ ಗೋಳಾಡಿಸುವುದಾಗಿದೆ. ಆದರೆ ಇಚ್ಛೆಯನ್ನು ತ್ಯಜಿಸಿಬಿಟ್ಟರೆ ಇಚ್ಛೆಯು ನಿಮ್ಮ ಹಿಂದೆ ಹಿಂದೆ ಹಿಂಬಾಲಿಸುವುದು. ಬೇಡುವವರು ಎಂದೂ ಸಂಪನ್ನರಾಗಲು ಸಾಧ್ಯವಾಗುವುದಿಲ್ಲ. ನೀವು ಬೇರೆ ಏನೂ ಬೇಡುವುದಿಲ್ಲ. ಆದರೆ ರಾಯಲ್ ಬೇಡಿಕೆಗಳು ಅನೇಕವಿವೆ. ರಾಯಲ್ ಬೇಡಿಕೆಗಳು ಏನಾಗಿವೆ ಎಂಬುದನ್ನು ತಿಳಿದುಕೊಂಡಿದ್ದೀರಲ್ಲವೇ? ಅಲ್ಪಕಾಲದ ಹೆಸರು ಕೀರ್ತಿಯು ಸಿಕ್ಕಿಬಿಡಲಿ, ಸ್ವಲ್ಪ ಮನ್ನಣೆ ಸನ್ಮಾನವು ದೊರೆತುಬಿಡಲಿ, ಯಾವಾಗಲಾದರೂ ನನ್ನ ಹೆಸರೂ ಸಹ ಹಿರಿಯ ಸೋದರಿಯರಲ್ಲಿ ಪರಿಗಣಿಸಲ್ಪಡಲಿ, ಕನಿಷ್ಟಪಕ್ಷ ನನಗೂ ಸಹ ಅವಕಾಶವು ದೊರೆಯಬೇಕು ಎಂದು ಬೇಡುತ್ತೀರಿ. ಆದರೆ ಎಲ್ಲಿಯವರೆಗೆ ಬೇಡುವವರಾಗಿರುತ್ತೀರೋ ಅಲ್ಲಿಯವರೆಗೆ ಎಂದಿಗೂ ಖುಷಿಯ ಖಜಾನೆಯಿಂದ ಸಂಪನ್ನರಾಗಲು ಸಾಧ್ಯವಾಗುವುದಿಲ್ಲ. ಹೀಗೆ ಬೇಡಿಕೆಯ ಬೆನ್ನುಹತ್ತುವುದು ಅಥವಾ ಯಾವುದಾದರೂ ಅಲ್ಪಕಾಲದ ಇಚ್ಛೆಗಳ ಬೆನ್ನ ಹತ್ತುವುದು ಮೃಗತೃಷ್ಣೆಯ ಸಮಾನ ಆಗಿದೆಯೆಂಬುದನ್ನು ತಿಳಿದುಕೊಳ್ಳಿರಿ. ಇದರಿಂದ ಸದಾ ದೂರವಿರಿ. ಸಣ್ಣವರಾಗಿರುವುದೇನೋ ಕೆಟ್ಟದ್ದಲ್ಲ. ಸಣ್ಣವರು ಭಗವಂತನ ಸಮಾನ ಆಗಿದ್ದಾರೆ. ಏಕೆಂದರೆ, ಬಾಪ್ದಾದಾರ ಹೃದಯ ಸಿಂಹಾಸನದ ಮೇಲೆ ಸ್ಥಾನವು ಮುಂದೆ ಇದೆ. ಅಲ್ಪಕಾಲದ ಇಚ್ಛೆಯ ಅನುಭವ ನೋಡಿರಬಹುದು. ಅದು ನಿಮ್ಮನ್ನು ಅಳಿಸುವುದಾಗಿದೆಯೋ ಅಥವಾ ನಗಿಸುವುದಾಗಿದೆಯೋ? ಗೋಳಾಡಿಸುತ್ತದೆಯಲ್ಲವೇ. ರಾವಣನ ಆಜ್ಞೆಯು ಗೋಳಾಡಿಸುವುದಾಗಿದೆ. ನೀವಂತೂ ಪರಮಪಿತನ ಮಕ್ಕಳಾಗಿದ್ದೀರಲ್ಲವೇ. ಹಾಗಾದರೆ ತಂದೆಯು ನಗಿಸುವವರಾಗಿದ್ದಾರೋ ಅಥವಾ ಅಳಿಸುವವರಾಗಿದ್ದಾರೋ?

ಇಂದು ಬಾಪ್ದಾದಾರವರು ವಿಶೇಷವಾಗಿ ಯಾವುದರ ಬಗ್ಗೆ ಗಮನವನ್ನು ಸೆಳೆಯುತ್ತಿದ್ದೇನೆಂದರೆ - ವ್ಯರ್ಥಮಾತು ಯಾರಿಗೂ ಹಿತವೆನಿಸುವುದಿಲ್ಲ. ನಿಮಗೆ ಹಿತವೆನಿಸಬಹುದು. ಆದರೆ ಅನ್ಯರಿಗೆ ಇಷ್ಟವಾಗುವುದಿಲ್ಲ. ಆದ್ದರಿಂದ ಸದಾಕಾಲದವರೆಗೆ ಆ ಶಬ್ದವನ್ನು ಸಮಾಪ್ತಿ ಮಾಡಿಬಿಲ್ಲ್. ಇಡೀ ದಿನದಲ್ಲಿ ಒಂದುವೇಳೆ ಬಾಪ್ದಾದಾರವರು ನಮ್ಮ ಬಳಿ ಮಕ್ಕಳ ಮಾತುಗಳನ್ನು... ಟಿಪ್ಪಣಿ ಮಾಡಿಕೊಂಡರೆ ಸಾಕಷ್ಟು ಫೈಲ್ ಆಗಬಹುದು. ಈ ಅಪಶಬ್ದಗಳು, ವ್ಯರ್ಥವಾದ ಶಬ್ದಗಳು, ಜೋರಾಗಿ ಮಾತನಾಡುವುದು.... ಈ ಜೋರಾಗಿ ಮಾತನಾಡುವುದೂ ಸಹ ವಾಸ್ತವವಾಗಿ ಅನೇಕರು ಶಾಂತಿಯನ್ನು ಭಂಗ ಮಾಡುತ್ತದೆ. ನನ್ನ ಧ್ವನಿಯೇ ಘಟ್ಟಿಯಾಗಿದೆ ಎಂದು ಹೇಳಬೇಡಿರಿ. ಮಾಯಾಜೀತರಾಗಬಲ್ಲಿರಿ ಆದರೆ ಶಬ್ದವನ್ನು ಜಯಿಸುವವರು ಆಗಲು ಸಾಧ್ಯವಿಲ್ಲವೇ. ಆದ್ದರಿಂದ ಇಂತಹ ಯಾರನ್ನಾದರೂ ವಿಚಲಿತರನ್ನಾಗಿ ಮಾಡುವ ಮಾತನ್ನು ವ್ಯರ್ಥವಾದ ಮಾತುಗಳನ್ನೂ ಆಡಬೇಡಿರಿ. ಎರಡು ಶಬ್ದಗಳ ಮಾತಾಗಿದ್ದರೂ ಅರ್ಧ ಘಂಟೆಯವರೆಗೆ ಆ ವಿಚಾರದ ಬಗ್ಗೆ ಮಾತನಾಡುತ್ತಾ ಇರುತ್ತಾರೆ. ಹೇಳುತ್ತಾ ಇರುತ್ತಾರೆ. ಹೀಗೆ ಏನು ಮಾತನ ಬೆಳೆಸುತ್ತೀರೋ ಯಾವ ಕಾರ್ಯವು ನಾಲ್ಕು ಶಬ್ಬಗಳಲ್ಲಿ ಆಗಲು ಸಾಧ್ಯವಿದೆಯೋ ಅದನ್ನು 12-15 ಶಬ್ದಗಳಲ್ಲಿ ವಿಸ್ತಾರ ಮಾಡಿ ಹೇಳಬೇಡಿರಿ. ನಿಮ್ಮ ಸ್ಲೋಗನ್ ಏನಿದೆಯೆಂದರೆ ಕಡಿಮೆ ಮಾತನಾಡಿ, ಮೆಲ್ಲಗೆ ನಿಧಾನವಾಗಿ ಮಾತನಾಡಿರಿ ಎಂದು. ನಾನು ಮೆಲ್ಲಗೆ ಮಾತನಾಡಬೇಕೆಂದು ಬಯಸುತ್ತೇನೆ, ಆದರೆ ನನ್ನ ಧ್ವನಿಯೇ ತುಂಬಾ ಘಟ್ಟಿಯಾಗಿದೆ ಎಂದು ಯಾರು ಹೇಳುತ್ತಾರೋ ಅವರು ಕೊರಳಿನಲ್ಲಿ ಒಂದು ಸ್ಲೋಗನ್ ಹಾಕಿಕೊಂಡುಬಿಡಲಿ. ಏನಾಗುತ್ತದೆಯೆಂದರೆ, ನೀವು ನಿಮ್ಮ ಗುಂಗಿನಲ್ಲಿ ಜೋರಾಗಿ ಮಾತನಾಡುತ್ತೀರಿ. ಆದರೆ ಬರುವವರು ಹೋಗುವವರು ಇದನ್ನು ಕೇಳಿ ಇವರ ಧ್ವನಿಯೇ ಗಟ್ಟಿಯಾಗಿದೆ ಎಂಬುದನ್ನು ತಿಳಿದುಕೊಳ್ಳುವುದಿಲ್ಲ. ಇವರಲ್ಲಿ ಪರಸ್ಪರ ಜಗಳವು ನಡೆಯುತ್ತಾ ಇದೆಯೆಂದು ತಿಳಿದುಕೊಳ್ಳುತ್ತಾರೆ. ಆದ್ದರಿಂದ ಇದೂ ಸಹ ಡಿಸ್-ಸರ್ವಿಸ್ ಆಯಿತು, ಆದ್ದರಿಂದ, ಈದಿನ ಧ್ವನಿಯ ಪಾಠವನ್ನು ಕಲಿಸುತ್ತಿದ್ದಾರೆ. ವ್ಯರ್ಥವಾದ ಮಾತು ಅಥವಾ ಯಾರ ಶಾಂತಿಯನ್ನಾದರೂ ಭಂಗ ಮಾಡುವ ಮಾತನ್ನು ಆಡಬೇಡಿರಿ. ಅದರಿಂದ ನಿಮ್ಮನ್ನು ಮುಕ್ತರನ್ನಾಗಿ ಮಾಡಿಕೊಳ್ಳಿರಿ. ವ್ಯರ್ಥವಾದ

ಮಾತಿನಿಂದ ಮುಕ್ತರಾಗಿರಿ. ಆಮೇಲೆ ಅವ್ಯಕ್ತ ಸೂಕ್ಷ್ಮದೇವತೆ ಆಗುವುದರಲ್ಲಿ ನಿಮಗೆ ತುಂಬಾ ನೆರವು ದೊರೆಯುವುದನ್ನು ಅನುಭವ ಮಾಡುವಿರಿ. ಮಾತು, ಮಾತು, ಮಾತು, ಮಾತನಾಡುತ್ತಲೇ ಇರುತ್ತೀರಿ. ಒಂದುವೇಳೆ ಬಾಪ್ದಾದಾರವರು ಟೇಪ್ನಲ್ಲಿ ಧ್ವನಿಮುದ್ರಿಕೆ ಮಾಡಿ ನಿಮಗೆ ನುಡಿಸಿದರೆ ನಿಮಗೂ ಸಹ ನಗು ಬರುವುದು. ಆದ್ದರಿಂದ ಯಾವ ಪಾಠವನ್ನು ಪಕ್ಕಾ ಮಾಡಿಕೊಂಡಿದ್ದೀರಿ? ಮಾತನಾಡುವುದರಲ್ಲಿ ಮಿತವ್ಯಯ ಮಾಡಲ (ಎಕಾನಮಿ) ನಿಮ್ಮ ನುಡಿಯ ಮೌಲ್ಯವನ್ನು ಇಟ್ಟುಕೊಳ್ಳಿರಿ. ಹೇಗೆ ಮಹಾತ್ಮರಿಗೆ ಸತ್ಯವಚನ ಮಹಾರಾಜ್ ಎಂದು ಹೇಳುತ್ತಾರಲ್ಲವೇ. ಹಾಗೆಯೇ ನಿಮ್ಮ ನುಡಿಯು ಸದಾ ಸತ್ಯವಚನ ಅರ್ಥಾತ್ ಏನಾದರೊಂದು ಪ್ರಾಪ್ತಿ ಮಾಡಿಸುವ ನುಡಿಯಾಗಿರಬೇಕು. ಯಾರನ್ನಾದರೂ ಇವರಂತೂ ತಿಳಿವಳಿಕೆಯಿಲ್ಲವರಾಗಿದ್ದಾರೆ ಹುಚ್ಚರಾಗಿದ್ದಾರೆಂದು ತಮಾಷೆಯಲ್ಲಿ ಒಮ್ಮೊಮ್ಮೆ ಹೇಳಿಬಿಡುತ್ತೀರಿ. ಇಂತಹ ಅನೇಕ ಶಬ್ದಗಳನ್ನು ಬಾಪ್ದಾದಾರವರು ಈಗ ಮರೆತುಬಿಟ್ಟಿದ್ದಾರೆ. ಆದರೆ ಕೇಳುತ್ತಾರೆ. ಆದ್ದರಿಂದ ಬ್ರಾಹ್ಮಣರ ಬಾಯಿಯಿಂದ ಇಂತಹ ಶಬ್ದಗಳು ಹೊರಬರುವುದು ಸತ್ಯವಚನ ಮಹಾರಾಜ್ ಆದ ನೀವು ಯಾರಿಗೋ ಶಾಪ ಕೊಡುವುದಾಗಿದೆಯೆಂದು ತಿಳಿದುಕೊಳ್ಳಿರಿ. ಯಾರನ್ನಾದರೂ ಶಾಪಗ್ರಸ್ತರನ್ನಾಗಿ ಮಾಡಬೇಡಿರಿ. ಸುಖವನ್ನು ಕೊಡಿ. ಯುಕ್ತಿಯುಕ್ತವಾದ. ಮಾತನಾಡಿರಿ, ಹಾಗೂ ಕೆಲಸಕ್ಕೆ ಬರುವಂತಹುದನ್ನು ಹೇಳಿರಿ, ವ್ಯರ್ಥವಾದ ಮಾತನ್ನು ನುಡಿಯಬೇಡಿರಿ. ಹೀಗೆ ಯಾವಾಗ ಮಾತನಾಡಲು ಪ್ರಾರಂಭ ಮಾಡುತ್ತೀರೋ ಆಮೇಲೆ ಒಂದು ಘಂಟೆಯಲ್ಲಿ ಎಷ್ಟು ಮಾತು ವ್ಯರ್ಥವಾದವು ಬಂದವೆಂದೂ ಎಷ್ಟು ಸತ್ಯವಚನ ಆದವೆಂದೂ ಪರಿಶೀಲನೆ ಮಾಡಿಕೊಳ್ಳಿರಿ. ನಿಮಗೆ ನಿಮ್ಮ ಮೌಲ್ಯದ ಅರಿವಿಲ್ಲ. ಆದ್ದರಿಂದ ನುಡಿಯ ಮೌಲ್ಯವನ್ನು ಅರಿತುಕೊಳ್ಳಿರಿ. ಅಪಶಬ್ದವನ್ನು ನುಡಿಯಬೇಡಿರಿ. ಶುಭ ಶಬ್ದವನ್ನು ನುಡಿಯಿರಿ. ಏಕೆಂದರೆ ಈಗ ಅಂತ್ಯ ಮಾಸವಾಗಿದೆ ಹಾಗೂ ಮುಂದಿ ತಿಂಗಳು ಡೈಮಂಡ್ ಜೂಬಿಲಿಯಿದೆ. ಹಾಗಾದರೆ ಇಡೀ ವರ್ಷವೂ ಡೈಮಂಡ್ ಆಗುವಿರೋ ಅಥವಾ 6 ತಿಂಗಳು ಡೈಮಂಡ್ ಆಗುವಿರೋ? ಇಡೀ ವರ್ಷವೂ ಆಗುವಿರಲ್ಲವೇ. ಆದ್ದರಿಂದ ಡೈಮಂಡ್ ಜೂಬಿಲಿಗೆ ಮುಂಚೆ ಮಕ್ಕಳಿಗೆ ವಿಶೇಷವಾಗಿ ಗಮನದಲ್ಲಿ ತಂದುಕೊಡುತ್ತಿದ್ದಾರೆ. ಬಾಪ್ದಾದಾರವರು ನಾಲ್ಕು ಕಡೆಯ ದೃಶ್ಯಗಳನ್ನಂತೂ ನೋಡುತ್ತಲೇ ಇದ್ದಾರೆ. ಇಡೀ ದಿನವೂ ನೋಡುತ್ತಾ ಇರುವುದಿಲ್ಲ. ಒಂದು ಸೆಕೆಂಡಿನಲ್ಲಿ ಎಲ್ಲವನ್ನೂ ನೋಡಬಲ್ಲರು. ಆದ್ದರಿಂದ ಪಾಠವನ್ನು ಪಕ್ಕಾ ಮಾಡಿಕೊಂಡಿರಾ? ಮುಕ್ತರಾಗಬೇಕೆಂದಿದ್ದೀರೊ ಅಥವಾ ಸ್ವಲ್ಪ ಸ್ವಲ್ಪ ಯುಕ್ತ ಹಾಗೂ ಸ್ವಲ್ಪ ಸ್ವಲ್ಪ ಮುಕ್ತರಾಗಬೇಕೆಂದಿದ್ದೀರೋ? ಪ್ರತಿಯೊಬ್ಬರೂ ನಿಮ್ಮನ್ನು ನೋಡಿಕೊಳ್ಳಿರಿ, ಅನ್ಯರನ್ನು ನೋಡಬೇಡಿರಿ. ನಾನು ತಂದೆಯ ಶ್ರೀಮತವನ್ನು ಎಷ್ಟು ಪಾಲನೆ ಮಾಡುತ್ತಾ ಇದ್ದೇನೆಂದು ನಿಮ್ಮನ್ನು ನೋಡಿಕೊಳ್ಳಿರಿ. ಈಗಂತೂ ಒಬ್ಬರನ್ನೊಬ್ಬರು ನೋಡುತ್ತೀರಿ - ಇವರು ಹೀಗೆ ಮಾಡುತ್ತಾ ಇದ್ದಾರೆ ಎಂದು ಗಮನಿಸುತ್ತೀರಿ. ಆದರೆ ಯಾವಾಗ ಅಧಿಕಾರವನ್ನು ಪಡೆಯುವುದರಲ್ಲಿ ಅವರು ಕೆಳಗಿನ ಪದವಿಯಲ್ಲಿ ಹೋದರೆ ಆ ಸಮಯದಲ್ಲಿ ನೀವು ಅವರಿಗೆ ಜೊತೆ ಕೊಡುವಿರಾ? ಆ ಸಮಯದಲ್ಲಿ ಅವರನ್ನು ನೋಡುವಿರಾ? ಆ ಸಮಯದಲ್ಲಿ ನೋಡುವುದಿಲ್ಲ. ಹಾಗಾದರೆ, ಈಗ ಏಕೆ ನೋಡುತ್ತೀರಿ. ಒಳ್ಳೆಯದು. ಎಲ್ಲರೂ ಮುಕ್ತರಾಗುವಿರಲ್ಲವೇ? ಒಳ್ಳೆಯದು. ಎಲ್ಲರಿಗೂ ಪಾಠವು ನೆನಪಿದೆಯೇ? ಯಾವ ಪಾಠ? ವ್ಯರ್ಥ ಮಾತಿನಿಂದ ಮುಕ್ತ... ನೆನಪಿದೆಯೇ? ಮರೆತುಬಿಟ್ಟಿಲ್ಲ ತಾನೇ? ಒಳ್ಳೆಯದು.

ನಾಲ್ಕೂ ಕಡೆಯ ಪೂರ್ವಜ ಆತ್ಮರಿಗೆ, ಸದಾ ಈ ನಿಶ್ಚಯ ಹಾಗೂ ನಶೆಯಲ್ಲಿ ಇರುವ ಶ್ರೇಷ್ಠ ಆತ್ಮರಿಗೆ ಸದಾ ತಂದೆಯ ಶ್ರೀಮತದ ಅನುಸಾರವಾಗಿ ಪ್ರತಿಯೊಂದು ಕರ್ಮವನ್ನು ಮಾಡುವ ಕರ್ಮಯೋಗೀ ಆತ್ಮರಿಗೆ, ಸದಾ ದೃಢ ಸಂಕಲ್ಪದಿಂದ ತಂದೆಯ ಪ್ರತಿಯೊಂದು ಹಜ್ಜೆಯ ಮೇಲೆ ಹೆಜ್ಜೆಯಿಡುವ, ತಂದೆಯನ್ನು ಅನುಕರಣೆ ಮಾಡುವ ಮಕ್ಕಳಿಗೆ ತುಂಬಾ ತುಂಬಾ ನೆನಪು - ಪ್ರೀತಿ ಹಾಗೂ ನಮಸ್ತೆ. ಡಬಲ್ ವಿದೇಶಿಯರಿಗೆ ಡಬಲ್ ನಮಸ್ತೆ.

ವರದಾನ: ವರದಾನ: ಲೌಕಿಕವನ್ನು ಅಲೌಕಿಕದಲ್ಲಿ ಪರಿವರ್ತನೆ ಮಾಡಿ ಮನೆಯನ್ನು ಮಂದಿರ ಮಾಡುವಂತಹ ಆಕರ್ಷಣಾಮೂರ್ತಿ ಭವ.

ಪ್ರವೃತ್ತಿಯಲ್ಲಿರುತ್ತಾ ಮನೆಯ ವಾಯುಮಂಡಲವನ್ನು ಈ ರೀತಿ ಮಾಡಿಕೊಳ್ಳಿ ಅದರಲ್ಲಿ ಯಾವುದೇ ಪ್ರಕಾರದ ಲೌಕಿಕತೆ ಇಲ್ಲದೇ ಇರಲಿ. ಯಾರೇ ಬಂದರೂ ಅನುಭವ ಮಾಡಲಿ ಇಲ್ಲಿ ಅಲೌಕಿಕತೆ ಇದೆ, ಲೌಕಿಕತೆ ಇಲ್ಲ. ಇದು ಸಾಧಾರಣ ಮನೆಯಲ್ಲ ಆದರೆ ಮಂದಿರವಾಗಿದೆ ಎಂದು. ಇದಾಗಿದೆ ಪವಿತ್ರ ಪ್ರವೃತ್ತಿಯವರ ಸೇವೆಯ ಪ್ರತ್ಯಕ್ಷ ಸ್ವರೂಪ. ಸ್ಥಾನ ಸಹ ಸೇವೆ ಮಾಡಲಿ, ವಾಯುಮಂಡಲ ಸಹ ಸೇವೆ ಮಾಡಲಿ. ಹೇಗೆ ಮಂದಿರದ ವಾಯುಮಂಡಲ ಎಲ್ಲರನ್ನೂ ಆಕರ್ಷಿತ ಮಾಡುವುದೊ ಹಾಗೆ ನಿಮ್ಮ ಮನೆಯಿಂದ ಪವಿತ್ರತೆಯ ಸುಗಂಧ ಬಂದಾಗ ಆ ಸುಗಂಧ ಸ್ವತಃ ನಾಲ್ಕಾರು ಕಡೆ ಹರಡುವುದು ಮತ್ತು ಎಲ್ಲರನ್ನೂ ಆಕರ್ಷಣೆ ಮಾಡುವುದು.

ಸ್ಲೋಗನ್: ಸ್ಲೋಗನ್: ಮನಸ್ಸು-ಬುದ್ಧಿಯನ್ನು ಧೃಡತೆಯಿಂದ ಏಕಾಗ್ರ ಮಾಡಿ ಬಲಹೀನತೆಯನ್ನು ಭಸ್ಮ ಮಾಡಿದಾಗ ಹೇಳಲಾಗುವುದು ಸತ್ಯ ಯೋಗಿ.

ಸೂಚನೆ: ಇಂದು ತಿಂಗಳಿನ ಮೂರನೇ ರವಿವಾರವಾಗಿದೆ, ಸಂಜೆ 6.30ಯಿಂದ 7.30ರವರೆಗೆ ವಿಶೇಷ ಯೋಗಾಭ್ಯಾಸದಲ್ಲಿ ಅನುಭವ ಮಾಡಿ ನಾನಾತ್ಮನ ಮೂಲಕ ಪವಿತ್ರತೆಯ ಕಿರಣಗಳು ಹೊರಬಂದು ಇಡೀ ವಿಶ್ವವನ್ನು ಪಾವನ ಮಾಡುತ್ತಿದೆ. ನಾನು ಮಾಸ್ಟರ್ ಪತಿತ ಪಾವನಿ ಆತ್ಮನಾಗಿದ್ದೇನೆ.